ರಾಜ್ಯದಲ್ಲಿ ನಕಲಿ ಪಡಿತರ ಚೀಟಿಗಳ ಕುರಿತು

2132 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು : ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ನಕಲಿ ಪಡಿತರ ಚೀಟಿಗಳ ಹಾವಳಿಗೆ ಸಂಬಂಧಪಟ್ಟಂತೆ ಇದುವರೆವಿಗೂ ಎಷ್ಟು ಜನರನ್ನು ಬಂಧಿಸಲಾಗಿದೆ?*

ಆ) *ಈ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು? ಪಡಿತರ ಚೀಟಿಗಳ ನೀಡಿಕೆಗೆ ಹಾಗೂ ಹೊಸ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಸರ್ಕಾರ ನಿಷೇಧಾಜ್ಞೆಯನ್ನೇನಾದರೂ ಜಾರಿಗೊಳಿಸಿದೆಯೇ?*

ಇ) *ಹಾಗಿದ್ದಲ್ಲಿ ಇದನ್ನು ಯಾವಾಗ ರದ್ದುಗೊಳಿಸಲಾಗುವುದು?*

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಕರ್ನಾಟಕ (ಅನಧಿಕೃತ ಪಡಿತರ ಚೀಟಿಗಳನ್ನು ತಡೆಗಟ್ಟುವ) ಆದೇಶ 1977 ರಲ್ಲಿ ಅನಧಿಕೃತ ಪಡಿತರ ಚೀಟಿಗಳನ್ನು ಹೊಂದಿರುವವರನ್ನು ಬಂಧಿಸಲು ಅವಕಾಶವಿರುವುದಿಲ್ಲ.

ಆ) ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚುವ ಕಾರ್ಯವು ನಿರಂತರವಾಗಿ ನಡೆಯುತ್ತಿದೆ. 1996ರ ಡಿಸೆಂಬರ್ ಮಾಹೆಯಿಂದ 1997ರ ಮೇ ಮಾಹೆಯವರೆಗೆ ನಡೆಸಿದ ನಕಲಿ ಪಡಿತರ ಚೀಟಿಗಳನ್ನು ಗುರುತಿಸಿ ತೆಗೆದು ಹಾಕುವ ವಿಶೇಷ ಕಾರ್ಯಕ್ರಮದ ಆಡಿ 8.62 ಲಕ್ಷ ನಕಲಿ ಪಡಿತರ ಚೀಟಿಗಳನ್ನು ಗುರುತಿಸಿ ರದ್ದುಮಾಡಲಾಗಿದೆ. ಹೊಸ ಪಡಿತರ ಚೀಟಿಗಳನ್ನು ವಿತರಿಸಲು ಮತ್ತು ಹೊಸ ನ್ಯಾಯಬೆಲೆ ಅಂಗಡಿಗಳನ್ನು ನೀಡಲು ಯಾವುದೇ ನಿರ್ಬಂಧವಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮಂತ್ರಿಗಳ ಪ್ರಯಾಣ ಭತ್ಯೆ

2135 - ಶ್ರೀ ಎನ್ ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96 , 1996-97ರ ಜೂನ್ ತಿಂಗಳ ತನಕ ಪ್ರತಿಯೊಬ್ಬ ಮಂತ್ರಿಗಳಿಗಾಗಿ ಪ್ರಯಾಣ ಮತ್ತು ಇನ್ನಿತರ ಭತ್ಯೆಗಳಿಗಾಗಿ ಎಷ್ಟು ಹಣ ನೀಡಲಾಗಿದೆ. (ಪೂರ್ತಿ ವಿವರಗಳನ್ನು ನೀಡುವುದು)?*

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.